## ದಿನಾಂಕ: 12.06.2018ರಂದು ಶ್ರೀರಂಗಪಟ್ಟಣ ಉಪ-ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು

ಹಾಜರಿದ್ದ ಅಧಿಕಾರಿ/ನೌಕರರು:

ಶ್ರೀಯುತ/ಶ್ರೀಮತಿ/ಕು

| | | |
|---|---|---|
| 1) | ಶ್ವೇತ | : ಅಧ್ಯಕ್ಷರು, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂಡ್ಯ ವೃತ್ತ |
| 2) | ಮುಜಾಮಿರ್ ಖಾನ್ | : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಪಾಂಡವಪುರ ವಿಭಾಗ |
| 3) | ಮಂಜುನಾಥ ಪ್ರಸಾದ್ | : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ |
| 4) | ಆರ್. ಚನ್ನಕೇಶವ | : ಸಹಾಯಕ ಇಂಜಿನಿಯರ್(ತಾಂ), ಶ್ರೀರಂಗಪಟ್ಟಣ |
| 5) | ಚಂದ್ರಮೌಳಿ | : ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ ಪಟ್ಟಣ ಶಾಖೆ |
| 6) | ಹೇಮಚಂದ್ರ | : ಸಹಾಯಕ ಇಂಜಿನಿಯರ್(ವಿ), ಬೆಳಗೊಳ ಶಾಖೆ |
| 7) | ಎನ್. ಶಿಲ್ಪ | : ಕಿರಿಯ ಇಂಜಿನಿಯರ್(ವಿ), ಕೆ.ಶೆಟ್ಟಹಳ್ಳಿ ಶಾಖೆ |
| 8) | ನವೀನ್‌ಕುಮಾರ್ | : ಕಿರಿಯ ಇಂಜಿನಿಯರ್(ವಿ), ನಗುವನಹಳ್ಳಿ ಶಾಖೆ |
| 9) | ಕೆ.ಆರ್. ರಾಜು | : ಕಿರಿಯ ಇಂಜಿನಿಯರ್(ವಿ), ಕೊಡಿಯಾಲ ಶಾಖೆ |
| 10) | ಪಲ್ಲವಿ | : ಕಿರಿಯ ಇಂಜಿನಿಯರ್(ವಿ), ಅರಕೆರೆ ಶಾಖೆ |
| 11) | ಮುತ್ತುರಾಜ್ | : ಪ್ರಭಾರ ಸಹಾಯಕ ಲೆಕ್ಕಾಧಿಕಾರಿ, ಪಾಂಡವಪುರ ವಿಭಾಗ |
| 12) | ಸುರೇಂದ್ರಮೋಹನ್ | : ಮಾಪಕ ಓದುಗರು ಅರಕೆರೆ ಶಾಖೆ |
| 13) | ಎಂ.ಆರ್. ಪ್ರವೀಣ್ | : ಪ್ರಭಾರ ಹಿರಿಯ ಸಹಾಯಕ, ಶ್ರೀರಂಗಪಟ್ಟಣ |
| 14) | ವಿ. ಕುಮಾರಸ್ವಾಮಿ | : ಪ್ರಭಾರ ಕಿರಿಯ ಅಪ್ತ ಸಹಾಯಕ, ಪಾಂಡವಪುರ |

ಜನಸಂಪರ್ಕ ಸಭೆಯ ಅಧ್ಯಕ್ಷರು ಬೆಳಿಗ್ಗೆ 10.30ರಲ್ಲಿ ಸಭೆಯನ್ನು ಪ್ರಾರಂಭಿಸಿ, ಸ್ವಾಗತ ಭಾಷಣವನ್ನು ಮಾಡುವ ಮೂಲಕ ಸಭೆಗೆ ಹಾಜರಾಗಿದ್ದ ಅಧಿಕಾರಿ/ನೌಕರ ವರ್ಗದವರಿಗೆ, ಗ್ರಾಹಕರಿಗೆ ಹಾಗೂ ಪತ್ರಕರ್ತರಿಗೆ ಸ್ವಾಗತ ಕೋರುತ್ತಾ, ಶ್ರೀರಂಗಪಟ್ಟಣ ತಾಲ್ಲೋಕು ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ದೂರು ಮತ್ತು ಸಲಹೆಗಳನ್ನು ಮುಕ್ತವಾಗಿ ಚರ್ಚಿಸಲು ಕೋರಿದರು. ನಂತರ ಸಭೆಯಲ್ಲಿ ನೊಂದಾಯಿಸಲ್ಪಟ್ಟ ದೂರು ಮತ್ತು ದೂರಿಗೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

| | ದೂರು | ಕ್ರಮ |
|---|---|---|
| 1) | **ಶ್ರೀ ಎನ್.ಟಿ. ಪುಟ್ಟಸ್ವಾಮಿ, ನೆಲಮನೆ ಮೊಬೈಲ್ ಸಂಖ್ಯೆ: 9901937832** | |
| | ಎ) ಸದರಿ ಗ್ರಾಹಕರು ತ್ರೈಮಾಸಿಕ ಗ್ರಾಹಕರ ಸಭೆಯ ಮಾಹಿತಿಯನ್ನು ತಾಲ್ಲೋಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ತಿಳಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸಭೆಗೆ ಗ್ರಾಹಕರು ಹಾಜರಾಗಲು ಅನುಕೂಲ ಮಾಡಬೇಕಾಗಿ ಕೋರಿರುತ್ತಾರೆ. | ಉಪ-ವಿಭಾಗ ಅಧಿಕಾರಿಗಳು ನೀತಿ ಸಮಿತಿ ಇಂದ ಕಾರಣ ಮಾಹಿತಿ ನೀಡಲಾಗದ ಕಾರಣ ಮುಂದಿನ ಸಭೆಯನ್ನು ನಡೆಸುವ ಮುನ್ನ ಮಾಹಿತಿ ನೀಡಲಾಗುವುದೆಂದು ತಿಳಿಸಲಾಯಿತು. |
| | ಬಿ) ಕಳೆದ ತಿಂಗಳು (ಮೇ-2018) ಎಫ್-4 ದರಸಗುಪ್ಪೆ ಫೀಡರ್ ಹಲವಾರು ಬಾರಿ ವಿದ್ಯುತ್ ವ್ಯತ್ಯಯವಾಗಿದ್ದು, (332ಸಂಖ್ಯೆಗಳು) ವಿದ್ಯುತ್ ವ್ಯತ್ಯಯದ ಬಗ್ಗೆ ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ ರವರಿಂದ ಕಾರಣಸಹಿತ ಮಾಹಿತಿ ಕೋರಿರುತ್ತಾರೆ. | ಸಭೆಯ ಅಧ್ಯಕ್ಷರು, ಸದರಿ ವ್ಯಾಪ್ತಿಯ ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣ ಶಾಖೆ ರವರಿಗೆ ವಿದ್ಯುತ್ ವ್ಯತ್ಯಯದ ಬಗ್ಗೆ ಗಮನಹರಿಸಿ, ಮುಂದಿನ ದಿನಗಳಲ್ಲಿ ವ್ಯತ್ಯಯಗಳನ್ನು ಕಡಿಮೆಗೊಳಿಸಲು ತಿಳಿಸಿರುತ್ತಾರೆ. |
| 2) | **ಶ್ರೀ ಟಿ. ನಾಗೇಂದ್ರ, ದರಸಗುಪ್ಪೆ, ಮೊಬೈಲ್ ಸಂಖ್ಯೆ: 9964153819** | |
| | 2005ನೇ ಸಾಲಿನಲ್ಲಿ ಸದರಿ ಗ್ರಾಹಕರು ಹಣ ಕಟ್ಟಿದ್ದು, ಇದುವರೆಗೂ ಮೂಲಭೂತ ಸೌಕರ್ಯ ಕಲ್ಪಿಸಿಲ್ಲದ ಬಗ್ಗೆ ಪ್ರಸ್ತಾಪಿಸಿದ್ದು, ಕಾರಣ ಕೋರಿರುತ್ತಾರೆ. | ಸಭೆಯ ಅಧ್ಯಕ್ಷರು ಸದರಿ ಗ್ರಾಹಕರ ಅರ್ಜಿಯನ್ನು ಸ್ವೀಕರಿಸಿ, ತುರ್ತಾಗಿ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. |
| 3) | **ಶ್ರೀ ನಾಗೇಂದ್ರಸ್ವಾಮಿ, ಕೂಡಲಕುಪ್ಪೆ, ಮೊಬೈಲ್ ಸಂಖ್ಯೆ: 9945153474** | |
| | ಕೂಡಲಕುಪ್ಪೆ ಗ್ರಾಮಕ್ಕೆ ನಿರಂತರ ವಿದ್ಯುತ್ ಸೌಲಭ್ಯದ ಕೊರತೆ ಬಗ್ಗೆ ಪ್ರಸ್ತಾಪಿಸಿದ್ದು, ಅಧಿಕಾರಿಗಳಿಂದ ಮಾಹಿತಿ ಕೋರಿರುತ್ತಾರೆ. | ಸಭೆಯ ಅಧ್ಯಕ್ಷರು ಉಪ-ವಿಭಾಗ ಅಧಿಕಾರಿಗಳಿಂದ ಮಾಹಿತಿ ಪಡೆದು ಈಗಾಗಲೇ ಸದರಿ ಗ್ರಾಮಕ್ಕೆ ನಿರಂತರ ವಿದ್ಯುತ್ (Urban Feeder) ಸೌಲಭ್ಯ ಕಲ್ಪಿಸಿರುವ ಬಗ್ಗೆ ತಿಳಿಸಿ, ಮಳೆಗಾಲವಿರುವುದರಿಂದ, ವಿದ್ಯುತ್ ವ್ಯತ್ಯಯವಾಗುತ್ತಿದ್ದು, ವಿದ್ಯುತ್ ವ್ಯತ್ಯಯವನ್ನು ಕಡಿಮೆಗೊಳಿಸಲು ಸಹಾಯಕ ಇಂಜಿನಿಯರ್(ವಿ), ಶ್ರೀರಂಗಪಟ್ಟಣರವರಿಗೆ ಅಧ್ಯಕ್ಷರು ಆದೇಶಿಸಿರುತ್ತಾರೆ. |
| 4) | **ಶ್ರೀ ಜವರೇಗೌಡ, ಅರಕೆರೆ(ಮಂಡ್ಯಕೊಪ್ಪಲು) ಮೊಬೈಲ್ ಸಂಖ್ಯೆ: 9340375804** | |
| | ಸದರಿ ಗ್ರಾಹಕರು ತಮ್ಮ ವ್ಯಾಪ್ತಿಯಲ್ಲಿ ಹಾದುಹೋಗುವ ಮಂಡ್ಯಕೊಪ್ಪಲು ಫೀಡರ್ ದಿನಾಂಕ: 11.06.2018 ರಂದು ಹೆಚ್ಚಾಗಿ ವಿದ್ಯುತ್ ವ್ಯತ್ಯಯವಾಗಿದ್ದು, ಐ.ಪಿ. ಫೀಡರ್‌ಗೆ ದಿನದಲ್ಲಿ ನೀಡುವ 7 ಗಂಟೆಗಳಿಗೂ ಕಡಿಮೆ ಸಮಯ ವಿದ್ಯುತ್ ನೀಡುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. | ಕಿರಿಯ ಇಂಜಿನಿಯರ್(ವಿ), ಅರಕೆರೆ ರವರಿಗೆ ಮುಂದಿನ ದಿನಗಳಲ್ಲಿ ಐ.ಪಿ. ಫೀಡರುಗಳಿಗೆ 7 ಗಂಟೆಗೂ (ಮೂರು ಫೇಸ್) ಕಡಿಮೆ ವಿದ್ಯುತ್ ಸೌಲಭ್ಯ ನೀಡಿದ್ದಲ್ಲಿ ನಂತರ ಪರ್ಯಾಯ ವ್ಯವಸ್ಥೆ ಮಾಡಬೇಕಾಗಿ ತಿಳಿಸಿರುತ್ತಾರೆ. ಸಭೆಯ ಅಧ್ಯಕ್ಷರು ತಿಳಿಸಿರುತ್ತಾರೆ. |
| 5) | **ಶ್ರೀ ಪ್ರಭಾಕರ, ನೆಲಮನೆ ಮೊಬೈಲ್ ಸಂಖ್ಯೆ: 9844482418** | |
| | ಸದರಿ ಗ್ರಾಹಕರ ಗ್ರಾಮದಲ್ಲಿ ಕುಡಿಯುವ ನೀರಿನ ಪರಿವರ್ತಕವು ಸುಟ್ಟು ಹೋಗಿದ್ದು, ತುರ್ತಾಗಿ ಪರಿವರ್ತಕವನ್ನು ಬದಲಾಯಿಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿ ಕೋರಿರುತ್ತಾರೆ. | ಸಭೆಯ ಅಧ್ಯಕ್ಷರು ತುರ್ತಾಗಿ ಪರಿವರ್ತಕವನ್ನು ಬದಲಾಯಿಸಲು ಸಹಾಯಕ ಇಂಜಿನಿಯರ್(ವಿ) ರವರಿಗೆ ತಿಳಿಸಿರುತ್ತಾರೆ. |

| | ದೂರು | ಕ್ರಮ |
|---|---|---|
| 6) | **ಶ್ರೀ ವೆಂಕಟೇಶ್, ಗಂಜಾಂ ಮೊಬೈಲ್ ಸಂಖ್ಯೆ: 9945898244** | |
| | ಸದರಿ ಗ್ರಾಹಕರು ತಮ್ಮ ಐ.ಪಿ. ಸ್ಥಾವರಕ್ಕೆ ಅಕ್ರಮ-ಸಕ್ರಮ ಯೋಜನೆಯಡಿ ಹಣ ಕಟ್ಟಿದ್ದು, ಮೂರು ಕಂಬಗಳ ಅವಶ್ಯಕತೆ ಇರುವ ಬಗ್ಗೆ ಅರ್ಜಿಯನ್ನು ಸಲ್ಲಿಸಿ, ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಕೋರಿರುತ್ತಾರೆ. | ಉಪ-ವಿಭಾಗ ಅಧಿಕಾರಿಗಳು ಹಣ ಕಟ್ಟಿರುವ ರಸೀದಿಗಳನ್ನು ನೀಡಲು ಗ್ರಾಹಕರಿಗೆ ತಿಳಿಸಿ, ಸಹಾಯಕ ಇಂಜಿನಿಯರ್(ವಿ) ರವರಿಗೆ ಜೇಷ್ಠತೆ ಮೇರೆಗೆ ಅಂದಾಜು ಪಟ್ಟಿ ತಯಾರಿಸಿ, ಕಾಮಗಾರಿಯನ್ನು ಜೇಷ್ಠತೆ ಮೇರೆಗೆ ಪೂರ್ಣಗೊಳಿಸಲು ತಿಳಿಸಿರುತ್ತಾರೆ. |
| 7) | **ಶ್ರೀ ಶೇಖರ್, ಹೊಸೂರು ಮೊಬೈಲ್ ಸಂಖ್ಯೆ: 9611407986** | |
| | ಸದರಿ ಗ್ರಾಹಕರು 1968ರ ಇಸವಿಯಲ್ಲಿ ಶನೇಶ್ವರ ದೇವಸ್ಥಾನಕ್ಕೆ ವಿದ್ಯುತ್ ಕಲ್ಪಿಸಲಾಗಿದ್ದು, ಇದೇ ಗ್ರಾಮದ ಮತ್ತೊಬ್ಬ ಗ್ರಾಹಕರ ತಕರಾರು ಅರ್ಜಿಯ ಮೇರೆಗೆ ದಾಖಲಾತಿ ಕೊರತೆಯ ಕಾರಣ ವಿದ್ಯುತ್ ಕಡಿತಗೊಳಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. | ಸದರಿ ಸ್ಥಾವರದ ಮೂಲ ದಾಖಲಾತಿಗಳನ್ನು ಬದಗಿಸಿದಲ್ಲಿ ಮತ್ತೊಮ್ಮೆ ಸದರಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ಕಲ್ಪಿಸುವುದಾಗಿ ಅಧ್ಯಕ್ಷರು ತಿಳಿಸಿರುತ್ತಾರೆ. |
| 8) | **ಶ್ರೀ ರಾಮಕೃಷ್ಣ, ಟಿ.ಎಂ. ಹೊಸೂರು ಮೊಬೈಲ್ ಸಂಖ್ಯೆ: 9980612820** | |
| | ಕಳೆದ ಮೂರು ದಿನಗಳಿಂದ ಎಫ್-3 ಟಿ.ಎಂ. ಹೊಸೂರು ಫೀಡರ್‌ಗೆ ಅತಿಯಾದ ವ್ಯತ್ಯಯವಾಗುತ್ತಿರುವ ಬಗ್ಗೆ ಆಕ್ಷೇಪೆ ವ್ಯಕ್ತಪಡಿಸಿರುತ್ತಾರೆ. | ಸದರಿ ಫೀಡರಿನ ಬ್ರೇಕರ್ ಸಮಸ್ಯೆ ಇರುವುದರಿಂದ, ಅಧಿಕ ಭಾರದಿಂದ ವಿದ್ಯುತ್ ವ್ಯತ್ಯಯವಾಗುತ್ತಿರುವ ಬಗ್ಗೆ ತಿಳಿಸಿ, ಮುಂದಿನ ದಿನಗಳಲ್ಲಿ ಸರಿಯಾಗುವ ಬಗ್ಗೆ ತಿಳಿಸಿರುತ್ತಾರೆ. |

ಸಭೆಯನ್ನು 1.30ಕ್ಕೆ ಮುಕ್ತಾಯಗೊಳಿಸುತ್ತಾ, ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿಹಾಜರುಪಡಿಸುವಂತೆ ಉಪ-ವಿಭಾಗಾಧಿಕಾರಿಯವರಿಗೆ ಸೂಚಿಸಲಾಯಿತು.

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಲೆಅ(ತಾಂ)/ಶ್ರೀರಂಪ/2017-18/[illegible] 546 ದಿನಾಂಕ: 18/06/.2018

**ಪ್ರತಿಗಳನ್ನು ಇವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.**

1 ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾವಿಸನಿನಿ, ಮೈಸೂರು.
2 ಪ್ರಧಾನ ವ್ಯವಸ್ಥಾಪಕರು(ತಾಂ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು.
3 ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ನಿಗಮ ಕಾರ್ಯಾಲಯ, ಚಾವಿಸನಿನಿ, ಮಂಡ್ಯ.
4 ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.

**ಪ್ರತಿಗಳನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.**

1 ಲೆಕ್ಕಾಧಿಕಾರಿ, ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ, ಪಾಂಡವಪುರ.
2 ಲೆಕ್ಕಾಧಿಕಾರಿ, ಆಂತರಿಕ ಲೆಕ್ಕ ಪರಿಶೋಧನೆ, ಚಾವಿಸನಿನಿ, ಪಾಂಡವಪುರ.
3 ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ಶ್ರೀರಂಗಪಟ್ಟಣ/ನಗುವನಹಳ್ಳಿ/ಬೆಳಗೊಳ/ಕೆ.ಶೆಟ್ಟಿಹಳ್ಳಿ/ಅರಕೆರೆ/ಕೊಡಿಯಾಲ
4 ಕಛೇರಿ ಪ್ರತಿ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಚಾವಿಸನಿನಿ, ಶ್ರೀರಂಗಪಟ್ಟಣ.